SL No	UNIT NAME	2001-02	2002-2003
32	RENUKA SUGARS	21025	31475
33	S S K ALANDA	1982	0
34	SHAMNUR SUGARS	14548	16380
35	SHREE RAMA SSK LTD ,	1439	171
36	SHRI H S S K N	44750	37950
37	SIRAGUPPA & CO , BELLARY	3098	0
38	SIRAGUPPA S&C LTD , GOWRIBIDNUR	0	0
39	THE NARANJA SSK LTD BIDAR		12299
40	THUNGUABHADRA SUGAR WORKS	0	0
41	UGAR SUGAR WORKS LTD ,	27438	48747
42	VANIVILASA CO-OP S F LTD	0	0
43	VENKTESHWARA POWER PROJECT LTD		4879
	TOTAL	**324445**	**474132**

ತುಂಗಾ ಮೇಲ್ದಂಡೆ ಯೋಜನೆ ಪರಿಹಾರದ ಹಣ ನೀಡುವಲ್ಲಿ ವಿಳಂಬ

300 (725) ಶ್ರೀ ಬಿ ಹೆಚ್ ಬನ್ನಿಕೋಡ್ (ಹಿರೇಕೆರೂರು) ಮಾನ್ಯ ಜಲ ಸಂಪನ್ಮೂಲ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ ಯೋಜನೆ ಕಾರ್ಯಗತ ಮಾಡಲು ಮುಖ್ಯ ಕಾಲುವೆ ನಿರ್ಮಾಣಕ್ಕೆ 1 ಶಿವಮೊಗ್ಗ ತಾಲ್ಲೂಕು 2 ಹೊನ್ನಾಳಿ ತಾಲ್ಲೂಕು ಹಾಗೂ 3 ಹಿರೇಕೆರೂರು ತಾಲ್ಲೂಕುಗಳಲ್ಲಿ ಭೂಸ್ವಾಧೀನ ಮಾಡಿಕೊಂಡಿರುವ ಕ್ಷೇತ್ರವೆಷ್ಟು (ತಾಲ್ಲೂಕುವಾರು ವಿವರ ನೀಡುವುದು)

ಆ) ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿರುವ ಕ್ಷೇತ್ರ ಎಷ್ಟು ಹಾಗೂ ಒಟ್ಟು ಎಷ್ಟು ಕ್ಷೇತ್ರದ ರೈತರಿಗೆ ಪರಿಹಾರದ ಹಣ ನೀಡಲಾಗಿದೆ

ಇ) ಮುಖ್ಯ ಕಾಲುವೆ ಕೆಲಸ ಪೂರ್ಣಗೊಂಡಿರುವ ಹಾಗೂ ಪ್ರಗತಿಯಲ್ಲಿದ್ದಾಗ್ಯೂ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳದೇ ವಿಳಂಬ ಆಗಿದ್ದು ರೈತರು ದಿನನಿತ್ಯ ಪರಿಹಾರಕ್ಕಾಗಿ ಸರ್ಕಾರ ತೀವ್ರ ಕ್ರಮ ಜರುಗಿಸಿ ರೈತರಿಗೆ ಭೂ ಪರಿಹಾರ ನೀಡಲು ತೆಗೆದುಕೊಳ್ಳುವ ಕ್ರಮಗಳೇನು?

ಶ್ರೀ ಅಲ್ಲಂ ವೀರಭದ್ರಪ್ಪ (ಜಲ ಸಂಪನ್ಮೂಲ ಸಚಿವರು)

ಅ) ತುಂಗಾ ಮೇಲ್ದಂಡೆ ಯೋಜನೆ ಮುಖ್ಯ ಕಾಲುವೆಯ ನಿರ್ಮಾಣಕ್ಕಾಗಿ ತಾಲ್ಲೂಕುವಾರು ಭೂಸ್ವಾಧೀನ ಮಾಡಿಕೊಂಡಿರುವ ಕ್ಷೇತ್ರದ ವಿವರ ಈ ಕೆಳಗಿನಂತಿದೆ

1 ಶಿವಮೊಗ್ಗ ತಾಲ್ಲೂಕು – 626 ಎಕರೆ 4 ಗುಂಟೆ

2 ಹೊನ್ನಾಳಿ ತಾಲ್ಲೂಕು – 917 ಎಕರೆ 30 ಗುಂಟೆ

3 ಹಿರೇಕೆರೂರು ತಾಲ್ಲೂಕು – 95 ಎಕರೆ 38 ಗುಂಟೆ

ಆ) ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿರುವ ಕ್ಷೇತ್ರ ಮತ್ತು ರೈತರಿಗೆ ಹಣ ನೀಡಲಾಗಿರುವ ಒಟ್ಟು ಕ್ಷೇತ್ರದ ವಿವರ ಈ ಕೆಳಗಿನಂತಿದೆ

1 ಶಿವಮೊಗ್ಗ ತಾಲ್ಲೂಕು – 513 ಎಕರೆ 19 ಗುಂಟೆ
ಪರಿಹಾರದ ಹಣ ನೀಡಿರುವುದು ರೂ 9,92,30,328 00

2. ಹೊನ್ನಾಳಿ ತಾಲ್ಲೂಕು – 667 ಎಕರೆ 35 ಗುಂಟೆ
ಪರಿಹಾರ ಹಣ ನೀಡಿರುವುದು – ರೂ 4,14,13,647 00

3 ಹಿರೇಕೆರೂರು ತಾಲ್ಲೂಕು – 95 ಎಕರೆ 35 ಗುಂಟೆ
ಪರಿಹಾರದ ಹಣ ನೀಡಿರುವುದು – ರೂ 47,07,595 00
(ಪರಿಹಾರದ ಹಣ ವಿತರಿಸುವ ಕಾರ್ಯಚಾಲನೆಯಲ್ಲಿದೆ)

ಇ) ಶಿವಮೊಗ್ಗ ತಾಲ್ಲೂಕಿನ 112 ಎಕರೆ 25 ಗುಂಟೆ ಮತ್ತು ಹೊನ್ನಾಳಿ ತಾಲ್ಲೂಕಿನ 250 ಎಕರೆ 03 ಗುಂಟೆ ಭೂಮಿಯ ಬಾಕಿ ಇರುವ ಎಲ್ಲಾ ಪ್ರಕರಣಗಳಿಗೆ ನಿಗದಿಪಡಿಸಿದ ಕಾಲಮಿತಿಯೊಳಗೆ ಪರಿಹಾರವನ್ನು ಪಾವತಿಸಲು ಎಲ್ಲ ಅಗತ್ಯ ಕ್ರಮಕ್ಕೆಗೊಳ್ಳಲಾಗುವುದು ಶಿವಮೊಗ್ಗ ತಾಲ್ಲೂಕಿನಲ್ಲಿರುವ ಗ್ರಾಮಗಳ ಅವಾರ್ಡ್‌ಗಳನ್ನು ವಿಲೇವಾರಿಗೊಳಿಸಲಾಗಿದೆ ಈ ಎಲ್ಲಾ ಮೂಲ ಪ್ರಕರಣಗಳಲ್ಲಿ ಜೆ ಎಂ ಸಿ ಯಲ್ಲಿ ಕಂಡು ಬಂದ ಹೆಚ್ಚುವರಿ ವಿಸ್ತೀರ್ಣ ಮತ್ತು ಕಾಮಗಾರಿ ಅನುಷ್ಠಾನದ ಸಂದರ್ಭದಲ್ಲಿ ಆದ ಬದಲಾವಣೆಯಿಂದ ಭೂಸ್ವಾಧೀನಪಡಿಸಿಕೊಳ್ಳಬೇಕಾದ ಕ್ಷೇತ್ರಕ್ಕೆ ಮಾತ್ರ ಹೆಚ್ಚುವರಿ ವಿಸ್ತೀರ್ಣದ ಪ್ರಸ್ತಾವನೆಗಳು ಬಾಕಿ ಇರುತ್ತವೆ ಹೊನ್ನಾಳಿ ತಾಲ್ಲೂಕಿನ ಕೆಲವು ಗ್ರಾಮಸ್ಥರು ನಾಲಾ ಪಥ ಬದಲಾಯಿಸಲು ಹೋರಾಟ ನಡೆಸಿದ್ದು ಭೂಸ್ವಾಧೀನ ಪ್ರಕ್ರಿಯೆಯಂತೆ ಜೆ ಎಂ ಸಿ ಮಾಡಲು ಹೋದಾಗ ಅಡ್ಡಿಯುಂಟು ಮಾಡಿದ ಕಾರಣಕ್ಕಾಗಿ ಉಳಿದಿದ್ದು ಎಲ್ಲಾ ಮೂಲ ಪ್ರಕರಣಗಳಲ್ಲಿ ಜೆ ಎಂ ಸಿ ಯಲ್ಲಿ ಕಂಡು ಬಂದ ಹೆಚ್ಚುವರಿ ವಿಸ್ತೀರ್ಣ ಮತ್ತು ಕಾಮಗಾರಿ ಅನುಷ್ಠಾನದ ಸಂದರ್ಭದಲ್ಲಿ ಆದ ಬದಲಾವಣೆಯಿಂದ ಭೂಸ್ವಾಧೀನಪಡಿಸಿಕೊಳ್ಳಬೇಕಾದ ಕ್ಷೇತ್ರಕ್ಕೆ ಮಾತ್ರ ಹೆಚ್ಚುವರಿ ವಿಸ್ತೀರ್ಣ ಪ್ರಸ್ತಾವನೆಗಳು ಬಾಕಿ ಇರುತ್ತದೆ ಹಿರೇಕೆರೂರು ತಾಲ್ಲೂಕಿನಲ್ಲಿ ಭೂಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿರುವ 1138 ಎಕರೆ 38 ಗುಂಟೆ ಪೈಕಿ 128 ಎಕರೆ 16 ಗುಂಟೆ ಕ್ಷೇತ್ರ ಪ್ರಾಥಮಿಕ ಹಂತದಲ್ಲಿ ಚೌಕಾಶಿಗಾಗಿ ಇರುತ್ತದೆ ಬಾಕಿ ಉಳಿದ 960 ಎಕರೆ 31 ಗುಂಟೆ ಕ್ಷೇತ್ರಕ್ಕೆ 4(1) ಅಧಿಸೂಚನೆ ಹೊರಡಿಸಲಾಗಿದೆ

ತುಂಗಾ ಮೇಲ್ದಂಡೆ ಯೋಜನೆಗಾಗಿ ಭೂಸ್ವಾಧೀನಪಡಿಸಿಕೊಳ್ಳಲು ಶಿವಮೊಗ್ಗ ಮತ್ತು ರಾಣೀಬೆನ್ನೂರು ಕೇಂದ್ರಸ್ಥಾನವಾಗಿಟ್ಟುಕೊಂಡು ಎರಡು ವಿಶೇಷ ಭೂಸ್ವಾಧೀನಾಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದು ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಸ್ವಲ್ಪ ಮಟ್ಟಿಗೆ ವಿಳಂಬವಾಗಿದೆ ಇನ್ನು ಕೆಲವು ಪ್ರಕರಣಗಳಲ್ಲಿ ಗ್ರಾಮಸ್ಥರು ನಾಲಾ ಪಥ ಬದಲಾಯಿಸಲು ಹೋರಾಟ ನಡೆಸಿ ಭೂಸ್ವಾಧೀನ ಪ್ರಕ್ರಿಯೆಗೆ ಅಡ್ಡಿಪಡಿಸಿದ ಕಾರಣಕ್ಕಾಗಿ ಭೂಸ್ವಾಧೀನ ಪ್ರಕ್ರಿಯೆಯು ಸ್ವಲ್ಪ ವಿಳಂಬಗೊಂಡಿರುತ್ತದೆ ಸದರಿ [illegible] ರಾವರಿ ನಿಗಮ ನಿಯಮಿತದಿಂದ ಅನುಷ್ಠಾನಗೊಳ್ಳುತ್ತಿದ್ದು,

ಭೂಸ್ವಾಧೀನ ಮಾಡಿಕೊಳ್ಳಲಾದ ಭೂಮಾಲೀಕರಿಗೆ ಯಾವುದೇ ವಿಳಂಬವಿಲ್ಲದೆ ಪರಿಹಾರ ಧನವನ್ನು ನಿಯಮಾನುಸಾರ ಪಾವತಿಸಲಾಗುತ್ತಿದೆ

ತುಂಗಾ ಮೇಲ್ದಂಡೆ ಯೋಜನೆಗೆ ಆದ ವೆಚ್ಚ

301 (727) ಶ್ರೀ ಬಿ ಹೆಚ್ ಬನ್ನಿಕೋಡ್ (ಹಿರೇಕೆರೂರು) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ ಮುಖ್ಯ ಕಾಲುವೆಯ ಕಾಮಗಾರಿ ಈವರೆಗೆ ಎಷ್ಟು ಕಿಮೀ ಪೂರ್ಣಗೊಂಡಿದೆ ಹಾಗೂ ಎಷ್ಟು ಕಿಮೀ. ಕಾಲುವೆ ಕೆಲಸ ಪ್ರಗತಿಯಲ್ಲಿದೆ

ಆ) ಪೂರ್ಣಗೊಂಡಿರುವ ಹಾಗೂ ಪ್ರಗತಿಯಲ್ಲಿರುವ ಪ್ರತಿ ಕಿಮೀ ಕಾಲುವೆಯ ಅಂದಾಜು ಮೊತ್ತವೆಷ್ಟು ಟೆಂಡರ್ ಆದ ಮೊತ್ತವೆಷ್ಟು ಕೆಲಸ ಪೂರ್ಣಗೊಂಡ ನಂತರ ಗುತ್ತಿಗೆದಾರರಿಗೆ ಪಾವತಿಸಿದ ಮೊತ್ತವೆಷ್ಟು

ಇ) ಅಂದಾಜು ಮೊತ್ತಕ್ಕಿಂತ ಗುತ್ತಿಗೆದಾರರು ಟೆಂಡರ್ ಮೊತ್ತ ಕಡಿಮೆ ಇರುವುದು ಹಾಗೂ ಕಾಲುವೆಯ ಕಾಮಗಾರಿ ಆದನಂತರ ಪಾವತಿಸಿದ ಮೊತ್ತ ಅಂದಾಜು ಮೊತ್ತಕ್ಕಿಂತ ಅತೀ ಹೆಚ್ಚು ಆಗಿರುವುದನ್ನು ಸರ್ಕಾರ ಗಮನಿಸಿದೆಯೇ

ಈ) ಅಂದಾಜು ಮೊತ್ತಕ್ಕಿಂತ ಪಾವತಿಸಿದ ಮೊತ್ತ ಅತೀ ಹೆಚ್ಚಾಗಲು ಸಕಾರಣಗಳಿವೆಯೇ ಕಾರಣಗಳಿದ್ದರೆ, ಕಾನೂನು ಪ್ರಕಾರ ಸಂಬಂಧಪಟ್ಟ ಇಲಾಖೆಯವರಿಂದ ಅಂದಾಜು ಮೊತ್ತಕ್ಕಿಂತ ಹೆಚ್ಚಿನ ಮೊತ್ತ ಪಾವತಿಸಲು ಅನುಮತಿ ಪಡೆಯಲಾಗಿದೆಯೇ

ಶ್ರೀ ಅಲ್ಲಂ ವೀರಭದ್ರಪ್ಪ (ಜಲ ಸಂಪನ್ಮೂಲ ಸಚಿವರು)

ಅ) ಕಾಲುವೆ ಕಾಮಗಾರಿಗಳು ಕಿಮೀ 3 ರಿಂದ 174 ರವರೆಗೆ (ಕೆಲವು ರೀಚ್‌ಗಳನ್ನು ಹೊರತುಪಡಿಸಿ) ಪ್ರಗತಿಯ ವಿವಿಧ ಹಂತದಲ್ಲಿರುತ್ತವೆ ಯಾವುದೇ ಕಾಮಗಾರಿಗಳು ಪೂರ್ಣಗೊಂಡಿರುವುದಿಲ್ಲ

ಆ) ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ

ಇ) ಇತ್ತೀಚಿನ ದಿನಗಳಲ್ಲಿ ಗುತ್ತಿಗೆದಾರರು ಟೆಂಡರ್ ಮೊತ್ತವನ್ನು ಅಂದಾಜು ಮೊತ್ತಕ್ಕಿಂತ ಕಡಿಮೆ ನಮೂದಿಸುವುದು ಕಂಡುಬಂದಿರುತ್ತದೆ ಗುತ್ತಿಗೆ ಕರಾರಿನಂತೆ ಕೆಲವೊಮ್ಮೆ ಪಾವತಿಸುವ ಹಣ ಗುತ್ತಿಗೆ ಮೊತ್ತಕ್ಕಿಂತ ಹೆಚ್ಚಿನ ಸಂದರ್ಭದಲ್ಲಿ ಇವುಗಳಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯ ನಂತರ ಪಾವತಿಸಲಾಗುತ್ತಿದೆ

ಈ) ಕಾಮಗಾರಿ ಪ್ರಗತಿಯಲ್ಲಿದ್ದ ಸಂದರ್ಭದಲ್ಲಿ ಒದಗಿಬಂದ ಹೆಚ್ಚುವರಿ ಐಟಂಗಳು ಭೂಸ್ತಾರ ವ್ಯತ್ಯಾಸ ಇತ್ಯಾದಿಗಳಿಂದ ಮೊತ್ತವು ಹೆಚ್ಚಾಗಿರುತ್ತದೆ ಈ ಬಗ್ಗೆ ಪ್ರಸ್ತಾವನೆಗಳನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆಯ ನಂತರ ಪಾವತಿ ಮಾಡಲಾಗುತ್ತಿದೆ